**<u>ಸಾಕ್ಷಿಯನ್ನು ಪುನಃ ದಿನಾಂಕ 21-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಮುಂದುವರೆದ ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

**3.** ಲೋಕಾಯುಕ್ತ ಪೋಲಿಸರು ನನ್ನನ್ನು 2 ನೇ ಪಂಚನಾಗಿ ಮತ್ತು ಚಾಸಾಃ 2 ಎರಕಲ ಸ್ವಾಮಿರವರನ್ನು 1 ನೇ ಪಂಚರನ್ನಾಗಿ ಮಾಡಿದರು. ಫಿರ್ಯಾದುದಾರರು ನಮ್ಮ ಸಮಕ್ಷಮ ಅರ್ಜಿ ಮತ್ತು ಲಗತ್ತುಗಳು ಅಲ್ಲದೇ ಪ್ರಕರಣವನ್ನು ದಾಖಲು ಮಾಡಲು ನೀಡಿದ್ದ ದೂರು, ಪ್ರಥಮ ವರ್ತಮಾನ ವರದಿ ಮತ್ತು ರೂ.2,000/- ನಗದು ಹಣವನ್ನು, ದೂರವಾಣಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿದ್ದ ಮೊಬೈಲ್ ನ್ನು ಲೋಕಾಯುಕ್ತ ಇನ್ಸ್ ಪೆಕ್ಟರ್ ರವರಿಗೆ ನೀಡಿದ್ದರು. ಸದರಿ ಮೊಬೈಲ್ ನಲ್ಲಿದ್ದ ಸಂಭಾಷಣೆಯನ್ನು ಇನ್ಸ್ ಪೆಕ್ಟರ್ ರವರು ನಮಗೆ ಕೇಳಿಸಿದರು, ಅದರಲ್ಲಿ ಫಿರ್ಯಾದುದಾರರು, ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಮತ್ತು ಪಿ.ಡಿ.ಓ. ರವರ ಸಂಭಾಷಣೆ ಸ್ಪಷ್ಟವಾಗಿತ್ತು. ಅದರ ಪ್ರಕಾರ ಫಿರ್ಯಾದುದಾರರು ಮನೆಯ ಖಾತಾ ಬದಲಾವಣೆಯನ್ನು ಮಾಡಿಕೊಡುವಂತೆ ಸಂಭಾಷಣೆ ಇತ್ತು. ಸದರಿ ಸಂಭಾಷಣೆಯನ್ನು ನಮಗೆ ಕಂಪ್ಯೂಟರ್‌ನಲ್ಲಿ ಕೇಳಿಸಿದ ನಂತರ ಅದರ ಸಿ.ಡಿ.ಯನ್ನು ಮಾಡಿಸಿದರು. ಸದರಿ ಸಿ.ಡಿ.ಯನ್ನು ನೋಡಿದರೆ ಗುರುತಿಸುತ್ತೇನೆ.

**4.** ಆ ದಿನ ಫಿರ್ಯಾದುದಾರರು ರೂ.500/- ರ ನಾಲ್ಕು ನೋಟುಗಳನ್ನು ಅಂದರೆ ಒಟ್ಟು ರೂ.2,000/- ನಗದು ಹಣವನ್ನು ಇನ್ಸ್ ಪೆಕ್ಟರ್ ರವರ ಮುಂದೆ ಹಾಜರು ಪಡಿಸಿದ್ದು ಅದನ್ನು ಜಪ್ತು ಮಾಡಿಕೊಂಡಿರುತ್ತಾರೆ, ಸದರಿ ನಗದು ಹಣವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕರೆನ್ಸಿ ನೋಟುಗಳ ನಂಬರ್ ಗಳನ್ನು ಬರೆಯುವಂತೆ 1 ನೇ ಪಂಚರವರಿಗೆ ಇನ್ಸ್ ಪೆಕ್ಟರ್ ರವರು ತಿಳಿಸಿದ್ದು, ಅದರ ಪ್ರಕಾರ ಅವರು ಬರೆದಿರುತ್ತಾರೆ. ಸದರಿ ನೋಟುಗಳ ವಿವರಗಳನ್ನು

ಈಗ ನಿಪಿಃ **8** ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ **8(ಎ)** ಎಂದು ಗುರುತಿಸಲಾಯಿತು. ಸದರಿ ವಿವರಗಳಿಗೆ 1 ನೇ ಪಂಚರವರೂ ಸಹ ಸಹಿ ಮಾಡಿರುತ್ತಾರೆ. ನಂತರ ಒಂದು ಪಿಂಗಾಣಿ ಬೌಲ್ ನ್ನು ತರೆಸಿ ಅದರಲ್ಲಿ ಸೋಡಿಯಂ ಕಾರ್ಬೋರೇಟ್‌ನ ದ್ರಾವಣವನ್ನು ತಯಾರಿಸಿದಾಗ ಅದು ಬಣ್ಣರಹಿತವಾಗಿತ್ತು, ಅದರ ಮಾದರಿಯನ್ನು ಪ್ರತ್ಯೇಕವಾಗಿ ತೆಗೆದಿಟ್ಟರು. ನಂತರ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೋಕಾಯುಕ್ತ ಸಿಬ್ಬಂದಿಗಳ ಮೂಲಕ ಹಚ್ಚಿದರು. ಸದರಿ ನೋಟುಗಳನ್ನು ಪಂಚ ನಂ.1 ರವರ ಮುಖಾಂತರ ಎಣಿಸಿ ನಂತರ ಅವರ ಕೈಬೆರಳುಗಳನ್ನು ಬೌಲ್ ನ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ಸ್ ಪೆಕ್ಟರ್ ರವರು ಸದರಿ ನೋಟುಗಳನ್ನು ಫಿರ್ಯಾದುದಾರರಿಗೆ ನೀಡಿ ಅವುಗಳನ್ನು ಆರೋಪಿತರಿಗೆ ಕೊಟ್ಟಾಗ ಅದನ್ನು ಮುಟ್ಟಿದ ನಂತರ ಕೈಗಳನ್ನು ತೊಳೆಸಿದರೆ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ತಿಳಿಸಿದರು.

**5.** ಈ ಮೇಲೆ ಹೇಳಿದ ರೂ.2,000/- ನಗದು ಹಣವನ್ನು ಫಿರ್ಯಾದುದಾರರ ಜೇಬಿನಲ್ಲಿ ಇರಿಸಿ ಅದನ್ನು ಯಾರು ಕೇಳಿದರೆ ಅವರಿಗೆ ಕೊಡಿ ಇಲ್ಲವೇ ಅವರು ಹೇಳಿದ ಜಾಗದಲ್ಲಿ ಇಡಿ ಎಂದು ಸೂಚನೆ ನೀಡಿದರು. ಅಲ್ಲದೇ ನನಗೆ ಫಿರ್ಯಾದುದಾರರ ಜೊತೆಯಲ್ಲಿ ಹೋಗಿ ಅವರ ಮತ್ತು ಆರೋಪಿಗಳ ನಡುವೆ ಆಗುವ ಚಲನವಲನಗಳನ್ನು ಗಮನಿಸುವಂತೆ ತಿಳಿಸಿದರು. ಇನ್ಸ್ ಪೆಕ್ಟರ್ ರವರ ಫಿರ್ಯಾದುದಾರರಿಗೆ ಹಣ ನೀಡುವ ಸಮಯದಲ್ಲಿ ಅವರ ನಡುವೆ ನಡೆದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವ ಸಲುವಾಗಿ ವಾಯ್ಸ್ ರೆಕಾರ್ಡ್ ರ್ ನ್ನು ಕೊಟ್ಟಿದ್ದರು. ಆ ಸಮಯದಲ್ಲಿ ಒಟ್ಟು 15 ಫೋಟೋಗಳನ್ನು ತೆಗೆಸಿದ್ದು ಅವುಗಳನ್ನು ಈಗ ನ್ಯಾಯಾಲಯದಲ್ಲಿ ಗುರುತಿಸುತ್ತೇನೆ. ಸದರಿ ಫೋಟೋಗಳಲ್ಲಿ ಸಾಕ್ಷಿಯು ತನ್ನನ್ನು, ಪಂಚ ನಂ.1, ಇನ್ಸ್ ಪೆಕ್ಟರ್ ಮತ್ತು ಇತರರನ್ನು ಗುರುತಿಸಿದ್ದು ಅವುಗಳನ್ನು ನಿಪಿಃ **9** ರಿಂದ **23** ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆಗಳನ್ನು ಮಧ್ಯಾಹ್ನ 12-00 ರಿಂದ 2-30 ರವರೆಗೆ

ಮಾಡಿ ಹಣವಹಿಸಿಕೊಟ್ಟ ಪಂಚನಾಮೆ ಬರೆದರು. ಸದರಿ ಪಂಚನಾಮೆಯನ್ನು ಈಗ ನಿಪಿಃ **24** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಪ್ರತೀ ಪುಟದಲ್ಲಿ ನಾನು ಸಹಿ ಮಾಡಿರುತ್ತೇನೆ, ಕೊನೆಯ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ **24(ಎ)** ಎಂದು ಗುರುತಿಸಲಾಯಿತು.

**6.** ನಂತರ ಫಿರ್ಯಾದುದಾರರು ತಿಳಿಸಿದ ಪ್ರಕಾರ ಅವರನ್ನು ಗ್ರಾಮಪಂಚಾಯಿತಿ ಕಾರ್ಯಲಯಕ್ಕೆ ಕರೆದಿದ್ದಾರೆ ಎಂದು ತಿಳಿದ ಮೇಲೆ ನಾವುಗಳು ಎರಡು ಇಲಾಖಾ ವಾಹನದಲ್ಲಿ ಅಂದರೆ ಫಿರ್ಯಾದುದಾರರು, ನಾನು ಮತ್ತು ಸಿಬ್ಬಂದಿಗಳು ಒಂದು ವಾಹನದಲ್ಲಿ, ಇನ್ನೊಂದು ಜೀಪ್ ನಲ್ಲಿ ಇನ್ಸ್ ಪೆಕ್ಟರ್ ಹೆಬ್ಬಾಳ, ಪಂಚ ನಂ.1 ಮತ್ತು ಸಿಬ್ಬಂದಿಗಳು ಹಲಕುಂದಿ ಗ್ರಾಮಕ್ಕೆ ಹೋಗಿರುತ್ತೇವೆ. ಸದರಿ ಗ್ರಾಮದಲ್ಲಿದ್ದ ಸರ್ಕಾರಿ ಶಾಲೆಯ ಹತ್ತಿರ ಜೀಪ್ ನ್ನು ನಿಲ್ಲಿಸಿ ಮೊದಲಿಗೆ ಇನ್ಸ್ ಪೆಕ್ಟರ್ ರವರು ನನ್ನನ್ನು ಮತ್ತು ಫಿರ್ಯಾದುದಾರರನ್ನು ಪಂಚಾಯಿತಿಯ ಕಾರ್ಯಲಯದಲ್ಲಿ ಆರೋಪಿಗಳು ಇರುವ ಬಗ್ಗೆ ನೋಡಿಕೊಂಡು ಬನ್ನಿ ಎಂದು ತಿಳಿಸಿದರು. ನಾವಿಬ್ಬರು ಮುಂದೆ ಹೋದ ನಂತರ ಇನ್ಸ್ ಪೆಕ್ಟರ್ ಮತ್ತು ಪಂಚ ನಂ.1 ಸಿಬ್ಬಂದಿಯೊಂದಿಗೆ ನಮ್ಮನ್ನು ಹಿಂಭಾಲಿಸಿ ಬಂದರು.

**7.** ನಂತರ ಫಿರ್ಯಾದುದಾರರು ಪಂಚಾಯಿತಿಯ ಕಾರ್ಯದರ್ಶಿಯ ಬಗ್ಗೆ ವಿಚಾರಿಸಿದಾಗ ಅವರು ಕಛೇರಿ ಕೆಲಸದ ನಿಮಿತ್ತ ಬಳ್ಳಾರಿಯ ತಾಲ್ಲೂಕ ಪಂಚಾಯಿತಿ ಕಛೇರಿಗೆ ಹೋಗಿದ್ದಾರೆ ಎಂದು ತಿಳಿಸಿದರು, ಅದೇ ವಿಷಯವನ್ನು ನಾವಿಬ್ಬರು ಇನ್ಸ್ ಪೆಕ್ಟರ್ ರವರಿಗೆ ತಿಳಿಸಿರುತ್ತೇವೆ. ನಂತರ ನಾವು ಅದೇ ಇಲಾಖಾ ವಾಹನಗಳಲ್ಲಿ ಬಳ್ಳಾರಿಯ ತಾಲ್ಲೂಕು ಪಂಚಾಯಿತಿ ಕಛೇರಿಗೆ ಬಂದಿರುತ್ತೇವೆ. ಅಲ್ಲಿ ವಾಟರ್ ಬೂಸ್ಟ್ ರ್ ಹತ್ತಿರ ವಾಹನಗಳನ್ನು ನಿಲ್ಲಿಸಿ, ಅಲ್ಲಿಂದ ನಾನು ಮತ್ತು ಫಿರ್ಯಾದುದಾರರು ತಾಲ್ಲೂಕು ಕಛೇರಿಯ ಒಳಗಡೆ ಹೋಗುವಾಗ

ಕಾರ್ಯದರ್ಶಿಯವರು ಅಲ್ಲಿಯೇ ಕುಳಿತಿದ್ದನ್ನು ನೋಡಿ ಫಿರ್ಯಾದುದಾರರು ನನಗೆ ಆ ವಿಷಯವನ್ನು ತಿಳಿಸಿದರು. ನಂತರ ಫಿರ್ಯಾದುದಾರರು ಕಾರ್ಯದರ್ಶಿಯವರು ಕುಳಿತಿದ್ದ ಸ್ಥಳಕ್ಕೆ ಹೋಗಿದ್ದು ನಾನು ಹೊರಗಡೆ ನಿಂತಿದ್ದೆ. ಆ ಸಮಯದಲ್ಲಿ ನನಗೆ ಅಲ್ಲಿ ಸಿಬ್ಬಂದಿಗಳು ಓಡಾಡುತ್ತಿದ್ದರಿಂದ ಅವರಿಬ್ಬರ ನಡುವೆ ನಡೆದ ಸಂಭಾಷಣೆ ಸರಿಯಾಗಿ ಕೇಳಿಸಲಿಲ್ಲ ಮತ್ತು ಫಿರ್ಯಾದುದಾರರು ಹಣವನ್ನು ಅವರ ಕೈಗೆ ಕೊಟ್ಟರೋ ಇಲ್ಲವೇ ಜೇಬಿನಲ್ಲಿಟ್ಟರೋ ಎಂಬುವುದನ್ನು ನೋಡಿರುವುದಿಲ್ಲ. ನಂತರ ಫಿರ್ಯಾದುದಾರರು ಹೊರಗೆ ಬಂದು ತನ್ನ ಹೆಗಲ ಮೇಲೆ ಹಾಕಿಕೊಂಡಿದ್ದ ಟವಲ್ ನ್ನು ಜಾಡಿಸಿ ಇನ್ಸ್ ಪೆಕ್ಟರ್ ರವರಿಗೆ ಸನ್ನೆ ಕೊಟ್ಟರು. ಆ ರೀತಿ ಸನ್ನೆ ಕೊಡಬೇಕೆಂದು ಇನ್ಸ್ ಪೆಕ್ಟರ್ ರವರು ಹಣವಹಿಸಿಕೊಟ್ಟ ಪಂಚನಾಮೆಯ ಸಮಯದಲ್ಲಿ ಫಿರ್ಯಾದುದಾರರಿಗೆ ತಿಳಿಸಿದ್ದರು.

**8.** ಫಿರ್ಯಾದುದಾರರು ಇನ್ಸ್‌ಪೆಕ್ಟರ್ ರವರಿಗೆ ಸನ್ನೆ ನೀಡಿದ ನಂತರ ಎಲ್ಲರೂ ಒಳಗಡೆ ಹೋದೆವು. ಆಗ ಇನ್ಸ್‌ಪೆಕ್ಟರ್ ರವರು ಕಾರ್ಯದರ್ಶಿಯವರಿಗೆ ತಮ್ಮ ಪರಿಚಯ ಮಾಡಿಕೊಂಡು ಅವರ ಹೆಸರನ್ನು ವಿಚಾರಿಸಿದರು. ಆತನ ಹೆಸರು ಮತ್ತು ವಿಳಾಸವನ್ನು ತಿಳಿಸಿದ ನಂತರ ಅದೇ ಸಮಯದಲ್ಲಿ ಇನ್ನೊಬ್ಬ ಸಿಬ್ಬಂದಿ ಒಳಗಡೆ ಬಂದರು, ಅವರು ಚಾಸಾಃ 6 ಎಂ.ಸಿ. ಶಂಕರ ಮೂರ್ತಿ ಆಗಿರುತ್ತಾರೆ. ಅವರನ್ನೂ ಸಹ ಇನ್ಸ್ ಪೆಕ್ಟರ್ ರವರು ವಿಚಾರಿಸಿ ನಂತರ ಖಾತಾ ಬದಲಾವಣೆಗಾಗಿ ಕಾರ್ಯದರ್ಶಿಯವರು ರೂ.2,000/- ಗಳನ್ನು ಲಂಚವಾಗಿ ಸ್ವೀಕರಿಸುವಾಗ ಸಿಕ್ಕಿಬಿದ್ದಿದ್ದಾರೆ ನಿಮ್ಮ ಮೇಲಾಧಿಕಾರಿಗಳನ್ನು ಕರೆದುಕೊಂಡು ಬನ್ನಿ ಎಂದು ತಿಳಿಸಿದರು. ಆಗ ಚಾಸಾಃ 6 ರವರು ತಮ್ಮ ಮೇಲಾಧಿಕಾರಿಯಾಗಿದ್ದ ಚಾಸಾಃ 15 ಕೇಣಿ ಬಸಪ್ಪ ಕಾರ್ಯನಿರ್ವಹಕ ಅಧಿಕಾರಿಯನ್ನು ಕರೆದುಕೊಂಡು ಬಂದರು.

**9.** ಇನ್ಸ್ ಪೆಕ್ಟರ್ ರವರು ಚಾಸಾಃ 15 ರವರಿಗೆ ಕಾರ್ಯದರ್ಶಿಯವರು ಲಂಚ ಹಣವನ್ನು ಸ್ವೀಕರಿಸುವಾಗಿ ಸಿಕ್ಕಿಬಿದ್ದಿದ್ದಾರೆ ಎಂದು ತಿಳಿಸಿ ಆ ಬಗ್ಗೆ ಪಂಚನಾಮೆ ಮಾಡಬೇಕಾಗಿರುವುದರಿಂದ ಸಹಕರಿಸುವಂತೆ ಕೇಳಿಕೊಂಡರು. ಆ ಸಮಯದಲ್ಲಿ ತಾಲ್ಲೂಕು ಪಂಚಾಯಿತಿಯ ಮ್ಯಾನೇಜರ್ ಚಾಸಾಃ 5, ಇನ್ನೊಬ್ಬ ಕಾರ್ಯದರ್ಶಿ ಚಾಸಾಃ 7, 2 ನೇ ಆರೋಪಿ ಸುಮಲತರವರನ್ನು ಕರೆಯಿಸಿದ್ದರು. ಸದರಿರವರಿಗೆ ಕಾರ್ಯದರ್ಶಿಯವರು ಲಂಚದ ಹಣವನ್ನು ಸ್ವೀಕರಿಸುವಾಗ ಸಿಕ್ಕಿಬಿದ್ದಿದ್ದಾರೆ ಎಂದು ತಿಳಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡರು. ಅಲ್ಲದೇ ಖಾತಾ ಬದಲಾವಣೆಗೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳ ಬಗ್ಗೆ ವಿಚಾರಿಸಿದಾಗ ಚಾಸಾಃ 15 ರವರು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಂತರ ನೀಡುವುದಾಗಿ ತಿಳಿಸಿದರು.

**10.** ನಂತರ ಇನ್ಸ್ ಪೆಕ್ಟರ್ ರವರು ಸಿಬ್ಬಂದಿಗಳ ಮೂಲಕ ಎರಡು ಬೌಲ್ ಗಳಲ್ಲಿ ಡಿಸ್ಟಿಲ್ ವಾಟರ್ ಮತ್ತು ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದಾಗ ಅದು ಬಣ್ಣರಹಿತವಾಗಿತ್ತು, ಅದರಲ್ಲಿ ಒಂದನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡರು. ಇನ್ನೊಂದು ಬೌಲ್ ನಲ್ಲಿ ಹಣ ಪಡೆದಿದ್ದ ಕಾರ್ಯದರ್ಶಿಯವರು ಕೈಗಳನ್ನು ಅದ್ದಿಸಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಕಾರ್ಯದರ್ಶಿಯವರು ಅವರ ಅಂಗಿಯ ಜೇಬಿನಲ್ಲಿ ಇಟ್ಟುಕೊಂಡಿದ್ದರಿಂದ ಆತನ ಅಂಗಿಯನ್ನು ಬಿಚ್ಚಿಸಿ ಬೇರೆ ಅಂಗಿಯನ್ನು ನೀಡಿದರು. ಆ ಸಮಯದಲ್ಲಿ ಇನ್ಸ್ ಪೆಕ್ಟರ್ ರವರು ಫಿರ್ಯಾದುದಾರರನ್ನು ವಿಚಾರ ಮಾಡಿದ್ದರೋ ಇಲ್ಲವೋ ಎಂದು ಹೇಳಲು ಈಗ ನನಗೆ ಜ್ಞಾಪಕ ಇರುವುದಿಲ್ಲ. ನಂತರ ಅಂಗಿಯ ಜೇಬಿನ ಭಾಗವನ್ನು ದ್ರಾವಣದಲ್ಲಿ ಅದ್ದಿಸಿದರು, ಆಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅಂಗಿ ಮತ್ತು ಸದರಿ ದ್ರಾವಣವನ್ನು ಪ್ರತ್ಯೇಕವಾಗಿ ಜಪ್ತು ಮಾಡಿಕೊಂಡರು.

**11.** ನಂತರ ಇನ್ಸ್ ಪೆಕ್ಟರ್ ರವರು ಕಾರ್ಯದರ್ಶಿಯವರ ಅಂಗಿಯ ಎಡ ಜೇಬಿನಲ್ಲಿಟ್ಟುಕೊಂಡಿದ್ದ ಹಣ ಎಲ್ಲಿಂದ ಬಂದಿತ್ತು ಎಂದು ಕೇಳಿದಾಗ ಫಿರ್ಯಾದುದಾರರು ತನ್ನ ಮನೆ ಕಂದಾಯದ ಬಾಕಿ ಹಣವನ್ನು ಕೊಟ್ಟಿದ್ದಾಗಿರುತ್ತದೆ ಎಂದು ತಿಳಿಸಿದರು. ಸದರಿ ರೂ.2,000/- ಹಣವನ್ನು ಇನ್ಸ್ ಪೆಕ್ಟರ್ ರವರು ಜಪ್ತು ಮಾಡಿಕೊಂಡರು. ಆಗ ಫಿರ್ಯಾದುದಾರರು ತನ್ನ ಮನೆಯ ಕಂದಾಯದ ಬಾಬ್ತು ಯಾವುದೇ ಬಾಕಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿಯು ಇನ್ಸ್ ಪೆಕ್ಟರ್ ರವರಿಗೆ ಲಿಖಿತವಾಗಿ ಹಣ ಪಡೆದಿರುವ ಬಗ್ಗೆ ವರದಿಯನ್ನು ನೀಡಿದ್ದು ಅದನ್ನು ಈಗ **ನಿಪಿಃ 25** ಮತ್ತು ಸಾಕ್ಷಿಯ ಸಹಿಯನ್ನು **ನಿಪಿಃ 25(ಎ)** ಎಂದು ಗುರುತಿಸಲಾಯಿತು.

**12.** ನಂತರ ಇನ್ಸ್ ಪೆಕ್ಟರ್ ರವರು 1 ನೇ ಆರೋಪಿಯನ್ನು ದಸ್ತಗಿರಿ ಮಾಡಬೇಕಾಗಿರುವುದಾಗಿ ಚಾಸಾಃ 15 ತಾಲ್ಲೂಕ ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಿದರು. ಮೇಲೆ ಹೇಳಿದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು ಮಾದರಿ ಸೀಲ್ ಗಳನ್ನು ಹಾಕಿದರು. ಸದರಿ ಮಾದರಿ ಸೀಲ್ ಗಳನ್ನು ಪಂಚ ನಂ.1 ರವರ ಸ್ವಾಧೀನಕ್ಕೆ ನೀಡಿರುತ್ತಾನೆ. ಸದರಿ ಮಾದರಿ ಸೀಲ್ ಗಳನ್ನು ಈಗ **ನಿಪಿಃ 26** ಮತ್ತು ಸಾಕ್ಷಿಯ ಸಹಿಯನ್ನು **ನಿಪಿಃ 26(ಎ)** ಎಂದು ಗುರುತಿಸಲಾಯಿತು. ಫಿರ್ಯಾದುದಾರರಿಗೆ ನೀಡಿದ್ದ ವಾಯ್ಸ್ ರೆಕಾರ್ಡ್ ರ್ ನಲ್ಲಿ ಯಾವುದೇ ಸಂಭಾಷಣೆ ರೆಕಾರ್ಡ್ ಮಾಡಿಕೊಂಡಿರಲಿಲ್ಲ ಕಾರಣ ಅವರು ಸರಿಯಾಗಿ ರೆಕಾರ್ಡ್ ಮಾಡಿರಲಿಲ್ಲ. ಸ್ಥಳದಲ್ಲಿ ಇನ್ಸ್ ಪೆಕ್ಟರ್ ರವರು ತಯಾರಿಸಿದ್ದ ಕಚ್ಚಾ ನಕಾಶೆಯನ್ನು ಗುರುತಿಸುತ್ತೇನೆ, ಅದನ್ನು ಈಗ **ನಿಪಿಃ 27** ಮತ್ತು ಸಾಕ್ಷಿಯ ಸಹಿಯನ್ನು **ನಿಪಿಃ 27(ಎ)** ಎಂದು ಗುರುತಿಸಲಾಯಿತು.

**13.** ಈ ಮೇಲೆ ಹೇಳಿದ ಎಲ್ಲಾ ಪಕ್ರಿಯೆಗಳನ್ನು ಬಳ್ಳಾರಿಯ ತಾಲ್ಲೂಕು ಪಂಚಾಯಿತಿಯ ಕಾರ್ಯಾಲಯದಲ್ಲಿ ಮಾಡುವಾಗ 17 ಫೋಟೋಗಳನ್ನು ತೆಗೆಸಿದ್ದು ಅವುಗಳನ್ನು ಈಗ ನಿಪಿಃ **28** ರಿಂದ **44** ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಟ್ರ್ಯಾಪ್ ಪಂಚನಾಮೆಯನ್ನು ಮಧ್ಯಾಹ್ನ 3-30 ರಿಂದ ಸಂಜೆ 6-30 ರವರೆಗೆ ನಮ್ಮ ಸಮಕ್ಷಮ ಮಾಡಿರುತ್ತಾನೆ. ಸದರಿ ಪಂಚನಾಮೆಯನ್ನು ಈಗ ನಿಪಿಃ 45 ಎಂದು ಗುರುತಿಸಲಾಯಿತು. ಅದರ ಪ್ರತೀ ಪುಟದಲ್ಲೂ ನಾನು ಸಹಿಗಳನ್ನು ಮಾಡಿರುತ್ತೇನೆ, ಸಾಕ್ಷಿಯ ಕೊನೆಯ ಪುಟದಲ್ಲಿರುವ ಸಹಿಯನ್ನು ಈಗ ನಿಪಿಃ **45(ಎ)** ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆಯ ಸಮಯದಲ್ಲಿ ಜಪ್ತು ಮಾಡಿದ್ದ ಎಲ್ಲಾ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ನಾನು ನೋಡಿದ್ದ ಹಲಕುಂದಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಮತ್ತು ಪಿ.ಡಿ.ಓ. ರವರನ್ನು ಈಗ ನ್ಯಾಯಾಲಯದಲ್ಲಿ ಆರೋಪಿಗಳಾಗಿ ಗುರುತಿಸುತ್ತೇನೆ.

**(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಮಯ ಕೋರಿದ್ದರಿಂದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**